<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ಉತ್ತರ ಕನ್ನಡ ಜಿಲ್ಲೆ, ಕುಮಟಾ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಲಾಗಿರುವ ಸಮಗ್ರಾಭಿವೃದ್ಧಿ ಯೋಜನೆಗೆ ಅಂತಿಮ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂ. ನಅಇ 37 ಎಂಐಬಿ 2000, ದಿನಾಂಕ: 8-6-2000.
2. ದಿನಾಂಕ: 14-6-2002 ಮತ್ತು 19-7-2002 ಸಂ. ಪುರಸಭೆ:ಕುಮಟಾ: ಸಮಗ್ರಯೋಜನೆ:ಅಂತಿಮ:659:2002-03 ರ ಸದಸ್ಯ ಕಾರ್ಯದರ್ಶಿ, ಯೋಜನಾ ಪ್ರಾಧಿಕಾರ, ಪುರಸಭೆ, ಕುಮಟಾ ರವರ ಪತ್ರಗಳು.
3. ದಿನಾಂಕ: 5-12-2002 ರ ಪತ್ರ ಸಂ. ನಯೋಪ್ರಾಬಾ:ಸಮಗ್ರಯೋ: ಅಂತಿಮ(15):176:2002-03 ರ ನಗರ ಯೋಜನಾ ಇಲಾಖಾ ನಿರ್ದೇಶಕರ ಏಕ ಕಡತ.

ಪ್ರಸ್ತಾವನೆ:

ಮೇಲೆ-(1) ರಲ್ಲಿ ಓದಲಾದ ಆದೇಶದಲ್ಲಿ ಉತ್ತರ ಕನ್ನಡ ಜಿಲ್ಲೆ, ಕುಮಟಾ ಪಟ್ಟಣದ ಸಮಗ್ರಾಭಿವೃದ್ಧಿಯೋಜನೆಗೆ ತಾತ್ಕಾಲಿಕ ಅನುಮೋದನೆ ನೀಡಿರುತ್ತದೆ. ಮೇಲೆ-(2) ರ ಪತ್ರಗಳಲ್ಲಿ ಮುಖ್ಯಾಧಿಕಾರಿ, ಪುರಸಭೆ, ಕುಮಟಾ ಇವರ ಅಂತಿಮ ಅನುಮೋದನೆ ನೀಡುವಂತೆ ಕೋರಿರುತ್ತಾರೆ. ಅದರಂತೆ (3) ರ ನಗರ ಯೋಜನಾ ಇಲಾಖಾ ನಿರ್ದೇಶಕರು, ಕುಮಟಾ, ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸಮಗ್ರಾಭಿವೃದ್ಧಿ ಯೋಜನೆಯನ್ನು ತಯಾರಿಸಿ ಸಲ್ಲಿಸಿದ್ದು, ಸರ್ಕಾರದ ಅಂತಿಮ ಅನುಮೋದನೆಯನ್ನು ಕೋರಿರುತ್ತಾರೆ.

ಉತ್ತರ ಕನ್ನಡ ಜಿಲ್ಲೆ, ಕುಮಟಾ ಪಟ್ಟಣದ ಸಮಗ್ರಾಭಿವೃದ್ಧಿ ಯೋಜನೆಯನ್ನು 2021 ನೇ ಇಸವಿಗೆ ಅಂದಾಜಿಸಲಾದ 45,000 ಜನಸಂಖ್ಯೆಗೆ ತಯಾರಿಸಲಾಗಿದ್ದು, ಯೋಜನೆಯಲ್ಲಿ ಅಭಿವೃದ್ಧಿಗಾಗಿ ಒಟ್ಟು 705.90 ಹೆಕ್ಟೇರ ಪ್ರದೇಶವು ಬೇಕಾಗಬಹುದೆಂದು ಅಂದಾಜು ಮಾಡಲಾಗಿದ್ದು, ಈ ಪೈಕಿ ವಸತಿಗಾಗಿ 401.88 ಹೆಕ್ಟೇರ (ಶೇ56.93) ವಾಣಿಜ್ಯಕ್ಕೆ 35.43 ಹೆಕ್ಟೇರ (ಶೇ.5.02) ಹಾಗೂ ಉದ್ದಿಮೆಗಾಗಿ 24.05 ಹೆಕ್ಟೇರ (ಶೇ.3.40) ಪ್ರದೇಶವನ್ನು ಕಾದಿರಿಸಲಾಗಿದ್ದು, ಇನ್ನಿತರೆ ನಾಗರೀಕ ಸೌಲಭ್ಯಗಳಿಗೆಬಯಲು ಜಾಗ: ಉದ್ಯಾನವನಗಳಿಗೆ ಅಗತ್ಯ ಪ್ರದೇಶಗಳನ್ನು ನಿಗದಿಪಡಿಸಲಾಗಿದೆಯೆಂತಲೂ ಹಾಗೂ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಅಗತ್ಯವಾದ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದೆಯೆಂತಲೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ-12 ರಲ್ಲಿ ನಿರೂಪಿಸಿರುವ ಅಂಶಗಳಿಗೆ ಅನುಗುಣವಾಗಿ ತಯಾರಿಸಲಾಗಿದ್ದು, ಕೆ.ಟಿ.ಸಿ.ಪಿ. ಕಾಯ್ದೆ 1961 ರ ಕಲಂ-13(3) ರನ್ವಯ ಸರ್ಕಾರದ ಅಂತಿಮ ಅನುಮೋದನೆ ನೀಡುವಂತೆ ನಗರ ಯೋಜನಾ ನಿರ್ದೇಶಕರು ಕಡತ ಸಂ. ನಯೋ (15):176:ಸಮಗ್ರಅಯೋ:02, ದಿನಾಂಕ: 5-12-2002 ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

<u>ಸರ್ಕಾರಿ ಆದೇಶ ಸಂ. ನಅಇ 14 ಬೆಮುಪಾ, 2002, ಬೆಂಗಳೂರು, ದಿನಾಂಕ: 17-02-2003.</u>

ಉತ್ತರ ಕನ್ನಡ ಜಿಲ್ಲೆ, ಕುಮಟಾ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಸಮಗ್ರಾಭಿವೃದ್ಧಿ ಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ-13(3) ರನ್ವಯ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರವು ಅಂತಿಮ ಅನುಮೋದನೆ ನೀಡಿದೆ.

1. ಹೈಟೈಡ ಲೈನ (ಹೆಚ್.ಟಿ.ಎಲ್) ಅನ್ನು ಗುರ್ತಿಸಿದ ನಕ್ಷೆಗಳನ್ನು ವಿಭಾಗೀಯ ಅರಣ್ಯಾಧಿಕಾರಿಗಳು (ಡಿ.ಸಿ.ಎಫ್-ಸಿ.ಆರ್.ಜೆಡ್) ಇವರಿಂದ ಪಡೆದುಕೊಳ್ಳತಕ್ಕದ್ದು.
2. ಅಂತಿಮ ಸಮಗ್ರಾಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಅಂದರೆ ಅಭಿವೃದ್ಧಿಗೆ ಅನುಮತಿಸುವಾಗ ಸಿ.ಆರ್.ಜೆಡ್. ನ ನಿಯಮಾವಳಿಗಳ ಉಲ್ಲಂಘನೆಯಾಗದಂತೆ ಎಚ್ಚರ ವಹಿಸತಕ್ಕದ್ದು.

ಸಮಗ್ರಾಭಿವೃದ್ಧಿ ಯೋಜನೆಗೆ ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ವಿ. ಶ್ರೀಧರಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

801
20/2/03

Received one set of approved map & Report copy
8.9.2003

ಗೆ:
1. ನಗರ ಯೋಜನಾ ನಿರ್ದೇಶಕರು, ಬೆಂಗಳೂರು (ಸಮಗ್ರಾಭಿವೃದ್ಧಿ ಯೋಜನೆಯ ನಕ್ಷೆ ಹಾಗೂ ವರದಿಯೊಂದಿಗೆ). 2. ಮುಖ್ಯಾಧಿಕಾರಿ, ಪುರಸಭೆ, ಕುಮಟಾ.
3. ನಗರಾಭಿವೃದ್ಧಿ ಸಚಿವರ ಆಪ್ತ-ಕಾರ್ಯದರ್ಶಿ, ಬೆಂಗಳೂರು. 4. ವಾರದ ಗೆಜೆಟ್:ಶಾಖಾ ರಕ್ಷಾ ಕಡತ: ಹೆಚ್ಚಿನ ಪ್ರತಿಗಳು.